ಇಲ್ಲ ಎಂದುಕೊಳ್ಳುತ್ತಿದ್ದರು. ಹಾಗೆಂದು, ಅವರು ಎಲ್ಲವನ್ನೂ ವಿವರಿಸುತ್ತಿದ್ದರು. ಬರಬರುತ್ತ ಆತ, ಏಕೋನ್ಮಾದಿಯಾದ. ಅಂದರೆ ಆತನಿಗೆ ಯಾವಾಗಲೂ ಒಂದೇ ವಿಷಯದ ಗುಂಗು. ಭೂಜಲ ಮೂಲಕ ಎಲ್ಲಿ ಹೋದಲ್ಲಿ ಯಾವುದೊ ಒಂದು ಪ್ರಬಲ ಹಾಗೂ ಸೇಡಿನ ಕೈ ತನ್ನನ್ನು ಬೆಂಬತ್ತಿರುತ್ತದೆ ಎಂದು ಆತ ನಂಬಿದ್ದ, ಆದಾಗ್ಯೂ ಈ ಕುರಿತು ಆತ ಹೇಳಲಿಚ್ಛಿಸುತ್ತಿರಲಿಲ್ಲ. ಎಂದೋ ಯಾವಾಗಲೋ ಯಾರಾದರೂ 'ಯಾರ ಕೈ ಅದು?' ಎಂದು ಕೇಳಿದಾಗ, ಆತ ನಿಗೂಢವಾಗಿ ಉತ್ತರಧ್ರುವ ನಕ್ಷತ್ರದೆಡೆಗೆ ಬೊಟ್ಟು ಮಾಡಿ ತೋರಿಸುತ್ತ, 'ಅದು ಅಲ್ಲಿಂದ ಬರುತ್ತದೆ' ಎನ್ನುತ್ತಿದ್ದ. ವಾಸ್ತವದಲ್ಲಿ ಆತನ ವಿಫಲತೆಗಳು ನಿರಂತರವಾಗಿದ್ದವು ಹಾಗೂ ತುಂಬಾ ವಿಸ್ಮಯಕಾರಿಯಾಗಿದ್ದವು. ಅಂಥ ವಿಫಲತೆಗಳನ್ನು ಅನುಭವಿಸಿದ ಅವನ ತಲೆಯಲ್ಲಿ ಅವು ಮೊಳೆ ತೂರಿಸಿದಷ್ಟು ನೋವನ್ನುಂಟು ಮಾಡುತ್ತಿದ್ದವು. ಆದರೆ, ಓರ್ವ ಇಂಡಿಯನ್‌ನಲ್ಲಿ ಇರುವಷ್ಟು ತಾಳ್ಮೆ ಸ್ಕಾವಿನ್‌ಸ್ಕಿಯಲ್ಲಿತ್ತು. ಅಂಥ ತಾಳಿಕೊಳ್ಳುವ ಶಕ್ತಿ ನಿಜವಾದ ಹೃದಯದಿಂದಲೇ ಬರುತ್ತದೆ. ಹಂಗೇರಿಯಲ್ಲಿದ್ದಾಗ ಸಾವಿನಂತೆರಗಿದ ದಂಗೆಯನ್ನು ಸರಿಯಾಗಿ ಗ್ರಹಿಸದೆ ಅನೇಕ ಬಾರಿ ಚೂರಿಯ ತಿವಿತಕ್ಕೆ ಒಳಗಾದ. ಪ್ರಾಣದ ಹಂಗಿಲ್ಲದೆ ಹೋರಾಡಿದ, ಅದೇ ರೀತಿ ಆತ ತನ್ನ ದುರದೃಷ್ಟಕ್ಕೆ ಎಂದೂ ತಲೆಬಾಗಲಿಲ್ಲ. ಇರುವೆಯ ಹಾಗೆ ಕಷ್ಟಪಟ್ಟು ತೆವಳುತ್ತ, ಪರ್ವತ ಏರಿದ. ನೂರು ಬಾರಿ ಕೆಳಕ್ಕೆ ನೂಕಲ್ಪಟ್ಟ. ನೂರಾವೊಂದನೆಯ ಬಾರಿ ಮತ್ತೆ ತಾಳ್ಮೆಯಿಂದ ಮುಂದುವರೆದ. ತನ್ನ ದಾರಿಯಲ್ಲಿ ಸಾಗಿದ ಅವನೊಬ್ಬ ಅತ್ಯಂತ ವಿಶಿಷ್ಟ ವ್ಯಕ್ತಿಯಾಗಿದ್ದನೆಂದು ಹೇಳಬಹುದು. ಈ ವೃದ್ಧ ಸಿಪಾಯಿ ಅದೆಷ್ಟು ಬಗೆಯ ಬೆಂಕಿಯಲ್ಲಿ ಬೆಂದು ಗಟ್ಟಿಯಾದನೊ, ಏಟು ತಿಂದು ರೂಪಗೊಂಡನೊ ದೇವರೇ ಬಲ್ಲ. ಹೀಗಿದ್ದೂ ಅವನಲ್ಲಿ ಮಗುವಿನ ಹೃದಯವಿತ್ತು. ಕ್ಯೂಬಾದ ಸಾಂಕ್ರಾಮಿಕ ರೋಗದ ಸಂದರ್ಭದಲ್ಲಿ ಸಿಗರೇಟು ಫ್ಯಾಕ್ಟರಿಗೆ ಅತಿಯಾಗಿ ತಂಬಾಕು ಪೂರೈಸಿದ್ದರ ಪರಿಣಾಮವಾಗಿ ಆತನೊಳಗೆ ಕ್ವಿನೈನ್ ವಿಷ ಸೇರಿಕೊಂಡು ವೊಮಿಟೊ(ವಾಂತಿಗೆ ಕಾರಣವಾಗುವ ಒಂದು ಬಗೆಯ ಕಾಮಾಲೆ) ರೋಗಕ್ಕೆ ತುತ್ತಾದ. ಆದರೆ ಆ ಫ್ಯಾಕ್ಟರಿಯಿಂದ ಒಂದು ಬಿಡಿಗಾಸು ಕೂಡ ಅವನಿಗೆ ದಕ್ಕಲಿಲ್ಲ. ಎಷ್ಟೋ ಬಗೆಯ ನಿರಾಸೆಗಳ ನಂತರವೂ ಆತನ ಮನೋಬಲ ಕುಂದಿರಲಿಲ್ಲ. ಎಲ್ಲವೂ ಸರಿ ಹೋಗುತ್ತದೆ ಎಂಬ ಆಸೆಯಿಂದ ಸಾಗುವುದು ಆತನ ಅದ್ಭುತ ಗುಣವಿಶೇಷವಾಗಿತ್ತು. ಚಳಿಗಾಲದ ಸಮಯದಲ್ಲಿ ಆತ ಮತ್ತೆ ಪುನಃಶ್ಚೇತನ ಪಡೆಯುತ್ತಿದ್ದ. ಮುಂದೆ ಬರಲಿರುವ ದೊಡ್ಡ ಅವಕಾಶಗಳ ಕುರಿತು ಭವಿಷ್ಯ ನುಡಿಯುತ್ತಿದ್ದ. ಅಂಥ ಅವಕಾಶಗಳಿಗಾಗಿ ತಾಳ್ಮೆಗೆಟ್ಟು ದಾರಿ ಕಾಯುತ್ತಿದ್ದ. ಅವುಗಳನ್ನೇ ಧ್ಯಾನಿಸುತ್ತ ಇಡೀ ಬೇಸಿಗೆ ಕಳೆದು ಹೋಗುತ್ತಿತ್ತು. ಆದರೆ, ಒಂದೊಂದರಂತೆ ಎಷ್ಟೋ ಚಳಿಗಾಲಗಳು ಬಂದು ಹೋದವು. ಸ್ಕಾವಿನ್‌ಸ್ಕಿಯ ತಲೆ ಬೆಳ್ಳಗಾಯಿತೇ ವಿನಾ ಅಂಥದ್ದೇನೂ ಸಂಭವಿಸಲೇ ಇಲ್ಲ. ಏತನ್ಮಧ್ಯೆ, ಆತನನ್ನು ಮುಪ್ಪು ಆವರಿಸಿಕೊಳ್ಳುತ್ತಿರುವಂತೆ ಆತ ಶಕ್ತಿಗುಂದತೊಡಗಿದ. ಆತನ ಸಹನೆ ವೈರಾಗ್ಯವಾಗಿ ಪರಿವರ್ತಿತವಾಗತೊಡಗಿತು. ಮೊದಲಿನ ಶಾಂತ ಸ್ವಭಾವ ಹೋಗಿ ಆತ ಸೂಕ್ಷ್ಮಸಂವೇದಿಯಾದ, ಬೆಂಕಿಯಲ್ಲಿ ಬೆಂದು ಬೆಂದು ಗಟ್ಟಿಯಾಗಿದ್ದ ಈ ಸೇನಾನಿ, ಯಾವುದೇ ಒಂದು ಸಣ್ಣ ಕಾರಣಕ್ಕೂ ಕಣ್ಣೀರು ಹಾಕುವಂಥ ವ್ಯಕ್ತಿಯಾಗಿಬಿಟ್ಟ. ಇದರ ಹೊರತಾಗಿ, ಸ್ವಾಲೋ ಪಕ್ಷಿಗಳು, ಕಂದು ವರ್ಣದ ಗುಬ್ಬಿಯಂಥ ಹಕ್ಕಿಗಳು, ಹಿಮಾಚ್ಛಾದಿತ ಪರ್ವತಗಳು ಕಣ್ಣಿಗೆ ಬಿದ್ದರೆ ಸಾಕು ಅಥವಾ ವೇದನೆ ಕಲಕುವ ಸಂಗೀತ ಕೇಳಿದರೆ ಸಾಕು, ತುಂಬ ಉದ್ವೇಗಕ್ಕೊಳಗಾಗಿ ಬಿಡುತ್ತಿದ್ದ. ಎಲ್ಲಿಲ್ಲದ, ಮಾತೃಭೂಮಿಯ ಹಂಬಲದ ಭಾರದಿಂದ ಆತ ಆಗಾಗ್ಗೆ ಕುಗ್ಗಿ ಹೋಗುತ್ತಿದ್ದ. ಕಟ್ಟಕಡೆಗೆ, ತನಗಿನ್ನು ವಿಶ್ರಾಂತಿ ಬೇಕು ಎಂಬ ಒಂದೇ ಒಂದು ವಿಚಾರ ಅವನನ್ನು ಮುತ್ತಿಕೊಂಡಿತ್ತು. ಹೀಗೆ